ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಹರಿಹರ
ಸಿಸಿ 27/2016

ಪಿ ಡಬ್ಲ್ಯೂ-25

ಸಾಕ್ಷಿಯ ಹೆಸರುಃ ಹೊನ್ನಪ್ಪ ಸಿ ಡಬ್ಲ್ಯೂ-28

ತಂದೆಯ ಹೆಸರುಃ ಸಿದ್ದಪ್ಪ

ವಯಸ್ಸುಃ 61

ಉದ್ಯೋಗಃ ವ್ಯವಸಾಯ

ವಾಸಸ್ಥಳಃ ಸಾರಥಿ

ಸಾಕ್ಷಿಯನ್ನು ದಿನಾಂಕ ಃ 07.01.2020 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು
ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ

ಆರೋಪಿ ಪರಿಚಯ ಇರುತ್ತಾನೆ. ನನಗೆ ಸಾರಥಿ ಗ್ರಾಮದಲ್ಲಿ 14 ಎಕರೆ ಚಿಲ್ಲರೆ ಜಮೀನು ಇರುತ್ತದೆ ಅದರಲ್ಲಿ ಭತ್ತ ಬೆಳೆಯುತ್ತೇನೆ. 2010 ರಲ್ಲಿ ನಾನು ಭತ್ತ ಬೆಳೆದಿದ್ದೆ. ಸದರಿ ಭತ್ತವನ್ನು ಆರೋಪಿಗೆ ಮಾರಾಟ ಮಾಡಲು ನಂದಿತಾವರೆ ಶ್ರೀನಿವಾಸ ರೈಸ ಮಿಲ್ಲನಲ್ಲಿ ಮಾತುಕತೆ ಮಾಡಿದ್ದೆವು. ನಮ್ಮ ಊರಿನ ಪರಶುರಾಮ, ನಾಗಪ್ಪ ಮತ್ತು ಯಲ್ಲಪ್ಪ ಹಾಗೂ ನಾನು ಸೇರಿ ಒಂದು ಕ್ವಿಂಟಲಗೆ 1120-00 ರೂ ಅಂತೆ ಆರೋಪಿಯೊಂದಿಗೆ ಮಾತನಾಡಿದ್ದೆವು. ನಾವೆಲ್ಲರೂ ಸೇರಿ 400 ಚಿಲ್ಲರೆ ಭತ್ತ ಮಾರಾಟ ಮಾಡಿದ್ದು ಅದರಲ್ಲಿ ನನಗೆ ಸೇರಿದ 333 ಚೀಲ ಇದ್ದು ಅದರ ಬಾಬ್ತು ನನಗೆ 2,99,000 ಚಿಲ್ಲರೆ ಹಣ ಕೊಡಬೇಕಾಗಿತ್ತು. ಉಳಿದವರದು 80 ಚೀಲ , 24 ಚೀಲ, 49 ಚೀಲ ಕೊಟ್ಟಿರುತ್ತಾರೆ ಆದರೆ ಮೊತ್ತ ನೆನಪಿರುವುದಿಲ್ಲ. ಒಂದು ತಿಂಗಳ ಬಿಟ್ಟು ಹಣ ಕೊಡುವುದಾಗಿ ಹೇಳಿದ್ದ. ನಾವು ನಮ್ಮ ಭತ್ತವನ್ನು ನಂದಿತಾವರೆ ಮಿಲ್ಲಗೆ ತೆಗೆದುಕೊಂಡು ಹೋಗಿ ಕೊಟ್ಟು ಬಂದಿರುತ್ತೇವೆ. 25 ದಿನ ಆದ ನಂತರ ಆರೋಪಿ ಕಣ್ಮರೆಯಾಗಿ ಹೋಗಿರುತ್ತಾನೆ ಎಂದು ಗೊತ್ತಾಗಿ ನಾವು ನಂದಿತಾವರೆ ರೈಸ ಮಿಲ್ಲಗೆ ಹೋಗಿರುತ್ತೇವೆ. ಅಲ್ಲಿ ಸಾಕಷ್ಟು ಜನ ಸೇರಿಕೊಂಡಿದ್ದು ಯಾರದು ಹಣವನ್ನು ಕೊಟ್ಟಿಲ್ಲ ಕಣ್ಮರೆಯಾಗಿರುತ್ತಾನೆ ಎಂದು ಗೊತ್ತಾಗಿರುತ್ತದೆ. ಆರೋಪಿ ನಮಗೆ ಮೋಸ ಮಾಡಿರುತ್ತಾನೆ. ಸಾಕ್ಷಿ ನ್ಯಾಯಾಲಯದಲ್ಲಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರ** ವಕೀಲರಾದ ಶ್ರೀ ಆರ್.ಪಿ **ವಕೀಲರಿಂದಃ**

ಸಾರಥಿ ಗ್ರಾಮದಲ್ಲಿ ನಾನು ಎಲ್ಲರಿಗೂ ಪರಿಚಯ ಇರುವಂತಹ ವ್ಯಕ್ತಿ ಅಂದರೆ ಸರಿ. ಏನಾದರೂ ಪಂಚಾಯತಿ ಮಾಡುವುದು ಇದ್ದರೇ ನಾನು ಸಹ ಒಬ್ಬನಾಗಿ ಇರುತ್ತೇನೆ ಎನ್ನುವುದು

ನಿಜ. ನಾನು 2 ನೇ ತರಗತಿಯವರಗೆಗೆ ಓದಿರುತ್ತೇನೆ. ರೈತರು ಬೆಳೆದಂತಹ ಮಾಲನ್ನು ಮಾರಾಟ ಮಾಡಲು ಎ ಪಿ ಎಂ ಸಿ ಇರುತ್ತದೆ ಎನ್ನುವುದು ನಿಜ. ರೈತರು ಬೆಳೆದಂತಹ ಮಾಲನ್ನು ಎಂ ಪಿ ಎಂ ಸಿ ಮೂಲಕ ಮಾರಾಟ ಮಾಡಬೇಕು ಎಂದು ಕಾನೂನು ಇರುತ್ತದೆ ಎನ್ನುವುದು ನಿಜ. ಖರೀದಿ ಮಾಡಿದವರು ಖರೀದಿ ಮಾಡಿರುವುದಕ್ಕೆ ರಸೀದಿಯನ್ನು ಕೊಡಬೇಕು ಎನ್ನುವುದು ನಿಜ. ಆರೋಪಿಯಿಂದ ಭತ್ತ ಖರೀದಿ ಮಾಡಿರುವ ಬಿಲ್ಲನ್ನು ಪಡೆದುಕೊಂಡಿಲ್ಲ. ಆರೋಪಿ ಎಲ್ಲಿಗೆ ಹೋಗಿದ್ದ ಎಂದು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುತ್ತೇನೆ. ಆರೋಪಿಯಿಂದ ನಮಗೆ ಹಣ ಬರುವ ಕುರಿತು ಸಿವಿಲ್ ದಾವೆಯನ್ನು ಸಲ್ಲಿಸಿಲ್ಲ. ಪಿರ್ಯಾದಿದಾರ ನನಗೆ ಪರಿಚಯ ಇಲ್ಲ. ಪಿರ್ಯಾದಿಯನ್ನು ನಾನೇ ಕೊಟ್ಟಿರುತ್ತೇನೆ. ಪಿರ್ಯಾದಿಯನ್ನು ಕೊಡುವ ಪೂರ್ವದಲ್ಲಿ ರೈತ ಸಂಘದವರು ನಾವು ಸೇರಿ ಚರ್ಚೆ ಮಾಡಿ ಪಿರ್ಯಾದಿಯನ್ನು ಕೊಟ್ಟಿರುತ್ತದೆ ಅಂದರೆ ಸರಿಯಲ್ಲ. ನಾನು ಆರೋಪಿಗೆ 333 ಚೀಲ ಭತ್ತ ಹಾಗೂ ನಮ್ಮ ಊರಿನವರು 24 ಚೀಲ , 80 ಚೀಲ ಮತ್ತು 49 ಚೀಲ ಮಾರಾಟ ಮಾಡಿರುತ್ತೇವೆ ಎಂದು ಹೇಳಿರುವುದು ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಮೋಸ ಮಡದೇ ಇದದರೂ ಸಹ ಮತ್ತು ನನಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲದೇ ಇದ್ದರೂ ಸಹ ಆರೋಪಿ ನನಗೆ ಮೋಸ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನಂದಿತಾವರೆ ಗ್ರಾಮದಲ್ಲಿ ವಾಸ ಇದ್ದು ಅಲ್ಲಿ ಅವನಿಗೆ ಹೆಂಡತಿ , ಮಕ್ಕಳು, ಹೊಲ ಮನೆ ಇರುತ್ತದೆ ಎನ್ನುವುದು ನಿಜ. ಈಗಲೂ ಸಹ ಆರೋಪಿ ನಂದಿತಾವರೆ ಗ್ರಾಮದಲ್ಲಿ ವಾಸ ಇರುತ್ತಾನೆ ಎನ್ನುವುದು ನಿಜ. ಪೋಲಿಸರ ಮಾತನ್ನು ಹಾಗೂ ರೈತ ಸಂಘದವರ ಮಾತನ್ನು ಕೇಳಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನಮಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹರಿಹರ